# ಸಂಪಾದಕೀಯ

## ಧಾರ್ಮಿಕ ಶಿಕ್ಷಣದ ಅಗತ್ಯ

**ಶಿ**ಕ್ಷಣದ ವ್ಯವಸ್ಥೆಯಲ್ಲಿ ಧಾರ್ಮಿಕ ವಿಚಾರಗಳನ್ನು ಬೋಧಿಸಬೇಕೇ ಬೇಡವೇ ಎಂಬ ಚರ್ಚೆ ಬಹು ಕಾಲದಿಂದಲೂ ನಡೆಯುತ್ತಲೇ ಬಂದಿದೆ. ಶಿಕ್ಷಣವು ಮನುಷ್ಯನಿಗೆ ಸಂಸ್ಕಾರ ನೀಡುವ ಪ್ರಕ್ರಿಯೆ. ಅವನಲ್ಲಿ ಹುದುಗಿರುವ ವಿಚಾರಶೀಲತೆಯನ್ನು, ಒಳಿತು–ಕೆಡಕುಗಳ ಪ್ರಜ್ಞೆಯನ್ನು ಜಾಗೃತಗೊಳಿಸುವುದೇ ಶಿಕ್ಷಣದ ಮೂಲ ಉದ್ದೇಶ. ಧರ್ಮವೂ ಕೂಡ ಇದನ್ನೇ ಮಾಡಬಯಸುತ್ತದೆ. ಕೇವಲ ಮೂಢ ನಂಬಿಕೆಗಳಿಗೆ, ಅವೈಚಾರಿಕ ಸಂಪ್ರದಾಯಗಳಿಗೆ ಸಮಾನಾರ್ಥವಾಗಿ ಧರ್ಮವನ್ನು ಕಂಡಾಗ ಅದು ಅನವಶ್ಯಕವೆಂದು ತೋರುತ್ತದೆ. ಬಾಹ್ಯ ಆಚರಣೆಗಳು ಧರ್ಮದ ಹೊರ ಕವಚವಷ್ಟೆ. ಮನುಷ್ಯನಲ್ಲಿ ನಾವು ಬಯಸುವ ಎಲ್ಲ ಒಳ್ಳೆಯ ಗುಣಗಳಿಗೂ, ನೈತಿಕತೆಗೂ ಧರ್ಮದಲ್ಲಿನ ಅವನ ನಂಬಿಕೆಯೇ ಮೂಲ ಕಾರಣ. ಮಾನವನಲ್ಲಿನ ಸಂಕುಚಿತ ದೃಷ್ಟಿಯನ್ನು ಹೋಗಲಾಡಿಸುವ ಶಕ್ತಿ ಧರ್ಮಕ್ಕಿದೆ. **ನೈಜ ಧರ್ಮವು ಮನುಷ್ಯನ ಅಂತಃಸ್ಫುರಣವಾಗಿ ಹೊರಹೊಮ್ಮುವಂತಹುದು. ಅವನಲ್ಲಿನ ವಿಶಾಲತೆಯ ಪ್ರತೀಕ ಹಾಗೂ ತನ್ನನ್ನೇ ಮೀರುವ ಪ್ರಯತ್ನವೇ ಧರ್ಮ.**

ಧರ್ಮವನ್ನು ಕುರಿತು ಇಂದಿನ ಸಮಾಜದಲ್ಲಿ ಅನೇಕ ಗೊಂದಲಗಳಿವೆ. ಬೇರೆ ಬೇರೆ ಮತಗಳು, ಆಚರಣೆಗಳು ಇವೆಲ್ಲ ಧರ್ಮವೆಂಬ ತಪ್ಪು ಅಭಿಪ್ರಾಯ ಎಲ್ಲರನ್ನೂ ಆವರಿಸಿದೆ. ದೇಶ–ಕಾಲಗಳ ಹಾಗೂ ವ್ಯಕ್ತಿಗಳ ನಡುವೆ ಇರುವ ವ್ಯತ್ಯಾಸಗಳಿಂದ ಅನೇಕ ಬಗೆಯ ಆಚರಣೆಗಳು ಮತೀಯ ಧರ್ಮಗಳಲ್ಲಿ ಕಂಡುಬರುತ್ತವೆ. ಒಂದು ಮತದಲ್ಲೇ ಬೇರೆ ಬೇರೆ ಪ್ರದೇಶಗಳಲ್ಲಿ ಆಚರಣೆಗಳಲ್ಲಿ ವ್ಯತ್ಯಾಸಗಳಿರುತ್ತವೆ. ಇಂದಿನ ಆಚರಣೆಗಳು ನಾಳೆಯ ದಿನ ಬದಲಾಗಲೂಬಹುದು. ಅದಕ್ಕೆ ಸಂಬಂಧಪಟ್ಟಂತೆ ಹೊಸ ನಿಯಮಗಳು, ಶಾಸ್ತ್ರಗಳು ಅಥವಾ ಸ್ಮೃತಿಗಳೂ ತಯಾರಾಗಬಹುದು. ಆದರೆ ಈ ಎಲ್ಲ ಆಚರಣೆಗಳಿಗೆ ಆಧಾರವಾಗಿರುವ ದೈವದಲ್ಲಿನ ನಂಬಿಕೆ ಹಾಗೂ ದೇವರನ್ನು ಸೇರಬೇಕು ಎಂಬ ತುಡಿತ—ಇವು ಧರ್ಮದ ತಿರುಳು. ಇವನ್ನು ಪ್ರತಿಯೊಬ್ಬ ಮಾನವನಲ್ಲೂ ಕಾಣಬಹುದು.

ಸುಖವನ್ನು ಬಯಸಿ ಜಗತ್ತು ತೋರುವ ಆಕರ್ಷಣೆಗಳ ಹಿಂದೆ ಓಡುವ ಪ್ರಾಪಂಚಿಕನಲ್ಲೂ ಶಾಶ್ವತವಾದ ಸುಖವನ್ನು ಪಡೆಯುವ ಹಂಬಲವಿದೆ. ಅವನು ಅದನ್ನು ತಿಳಿಯದೆ ತಾತ್ಕಾಲಿಕ ಮಾರ್ಗವನ್ನು, ವಿಧಾನಗಳನ್ನು ಅನುಸರಿಸುತ್ತಿರುವನಷ್ಟೆ. ಮೃತ್ಯುವನ್ನು ಗೆಲ್ಲಬೇಕೆಂಬ ಪ್ರಯತ್ನವನ್ನು ಮಾಡದವರು ಯಾರಿದ್ದಾರೆ? ವಯಸ್ಸಾಗದೆ ಉಳಿಯಬೇಕು, ಯುವಕರಂತೆ ಕಾಣಬೇಕು ಎಂದು ಪ್ರಯತ್ನಿಸುವ ಮನುಷ್ಯನ ಅನಂತ ಜೀವನದ ಬಯಕೆಯನ್ನು ಆಧರಿಸಿ ಕೋಟಿಗಟ್ಟಲೆ ಬಂಡವಾಳ ಹೂಡಿರುವ ಸೌಂದರ್ಯವರ್ಧಕ ಪದಾರ್ಥಗಳು ತಯಾರಾಗುತ್ತಿವೆ. Age defying formulae—ವೃದ್ಧಾಪ್ಯವನ್ನು ಗೆಲ್ಲುವ ಸೂತ್ರಗಳು ಎಂಬ ಶೀರ್ಷಿಕೆಯುಳ್ಳ ಹಲವಾರು ಲೇಖನಗಳು ಪ್ರತಿ ನಿತ್ಯ ಪ್ರಕಟವಾಗುತ್ತಿವೆ. ಮಾನವ ತಾನು ಸದಾ ಕಾಲ ಬದುಕಬೇಕು ಎಂದೇ ಬಯಸುತ್ತಾನೆ. ಪ್ರತಿನಿತ್ಯ ಸಾವನ್ನು ನೋಡುತ್ತಿದ್ದರೂ, ತಾನು ಮಾತ್ರ ಉಳಿಯುವೆ ಎಂದು ಭಾವಿಸುವ ಮನುಷ್ಯನ ವರ್ತನೆಯೇ ಅತ್ಯಂತ ಆಶ್ಚರ್ಯಕರವಾದ ಸಂಗತಿ ಎಂದು ಮಹಾಭಾರತದಲ್ಲಿ ಧರ್ಮರಾಯ ಹೇಳುತ್ತಾನೆ. ಬಲವಾಗಿ ಒಡಿದಿಡಲ್ಪಟ್ಟ ಸ್ಪ್ರಿಂಗ್ ಹೇಗೆ ತನ್ನ ನೈಜ ಸ್ಥಿತಿಗೆ ಬರಲು ಪ್ರಯತ್ನಿಸುತ್ತಿರುತ್ತದೋ ಅದೇ ರೀತಿಯಲ್ಲಿ ಪ್ರತಿಯೊಬ್ಬ ಮಾನವನ 'ಬದುಕಬೇಕು' ಎಂಬ ಹಂಬಲದ ಹಿನ್ನೆಲೆಯಲ್ಲಿ ಅನಂತ ಅಸ್ತಿತ್ವದ ಸ್ಥಿತಿಯನ್ನು ತಲುಪುವ ಪ್ರಯತ್ನವಿದೆ. ಈ ಪ್ರಯತ್ನವೇ ಜೀವನದ ಕಷ್ಟ–ನಷ್ಟಗಳನ್ನು ಎದುರಿಸಲು ಅವನಿಗೆ ಪ್ರೇರಣೆ ನೀಡುವಂತಹುದು.

ಬದುಕನ್ನು ಸಮಸ್ಯೆಯೆಂದು ತಿಳಿದು ಆತ್ಮಹತ್ಯೆಯ ಮೂಲಕ ಜೀವನರಂಗದಿಂದ ಪಲಾಯನ ಮಾಡುವವರೂ ಕೂಡ ಸ್ವಾತಂತ್ರ್ಯವನ್ನೇ ಬಯಸಿದವರು. ಆದರೆ ಅವರು ಅನುಸರಿಸುವ ವಿಪರೀತ ಮಾರ್ಗವು ಭಯ, ಭೀತಿಗಳನ್ನೇ ಪೋಷಿಸುವ ನೇತ್ಯಾತ್ಮಕ ವಿಧಾನವಾಗಿದ್ದು, ಹೇಡಿಗಳ ಹತಾಶೆಯನ್ನೇ ಪ್ರತಿಬಿಂಬಿಸುತ್ತದೆ. ಇತ್ತೀಚೆಗಂತೂ ಕ್ಷುಲ್ಲಕ ಕಾರಣಗಳಿಗೆ ಜೀವನವನ್ನು ಅಂತ್ಯಗೊಳಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿವೆ. ಒಂದು ಸಮೀಕ್ಷೆಯ ವರದಿಯಂತೆ ಸತತವಾಗಿ ಎಂಟು ವರ್ಷಗಳಿಂದ ಜಪಾನ್, ರಷ್ಯಾ ಹಾಗೂ ಹಂಗೆರಿ ದೇಶಗಳಲ್ಲಿ ಪ್ರತಿವರ್ಷವೂ ಮೂವತ್ತು ಸಾವಿರಕ್ಕೂ ಹೆಚ್ಚು ಆತ್ಮಹತ್ಯೆಗಳಾಗುತ್ತಿವೆ. ಅಂತರ್ಜಾಲದ ಮೂಲಕ ಮಾಹಿತಿಯನ್ನು ಸಂಗ್ರಹಿಸಿ, ಒಂದೆಡೆ ಸೇರಿ, ಹತ್ತಾರು ಜನ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವುದು ಈಗ ಚಾಲ್ತಿಗೆ ಬರುತ್ತಿದೆ. ಪರಸ್ಪರ ಧೈರ್ಯ ಹಾಗೂ ಪ್ರೇರಣೆ ನೀಡುವ ಇಂತಹ ಸಾಮೂಹಿಕ ಪ್ರಕ್ರಿಯೆಯಲ್ಲಿಯೂ ವೈಯಕ್ತಿಕವಾದ ಸಾವಿನ ಭಯವನ್ನು ಗೆಲ್ಲುವ ಪ್ರಯತ್ನವಿರುವುದವನ್ನು ಗುರುತಿಸಬಹುದು. ವಾತಾರು ತ್ಸುರಾಮಿ ಎಂಬ ಜಪಾನಿ ಲೇಖಕ ಆತ್ಮಹತ್ಯೆಯ ಸುಲಭ ವಿಧಾನಗಳನ್ನು ಕುರಿತು ಗ್ರಂಥ ಪ್ರಕಟಿಸಿದ್ದು, ಅದರ ಒಂದು ದಶಲಕ್ಷ ಪ್ರತಿಗಳು ಈಗಾಗಲೇ ಮಾರಾಟವಾಗಿವೆ! ಮನುಷ್ಯನು ಜೀವನದಲ್ಲಿ ಭರವಸೆಯನ್ನು ಏಕೆ ಕಳೆದುಕೊಳ್ಳುತ್ತಾನೆ ಎಂಬ ಮೂಲಭೂತ ಪ್ರಶ್ನೆಯನ್ನು ಇದು

ನೆನಪಿಸುತ್ತದೆ. ಮನೋವಿಜ್ಞಾನಿಗಳ ಅಭಿಪ್ರಾಯದಂತೆ ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಸಣ್ಣ ಕುಟುಂಬಗಳೇ ಇದಕ್ಕೆ ಕಾರಣವಂತೆ. ಮಕ್ಕಳಿಗೆ ಬೇಕಾಗುವ ಹಿರಿಯರ ಸಂಪರ್ಕ ಹಾಗೂ ಮಾರ್ಗದರ್ಶನಗಳ ಕೊರತೆ ಮತ್ತು ಆಯಾ ಸಂಪ್ರದಾಯದ ಧಾರ್ಮಿಕ ನಂಬಿಕೆಗಳ ಪರಿಚಯ ಇಲ್ಲದಿರುವುದು ಛಿದ್ರ ವ್ಯಕ್ತಿತ್ವಗಳನ್ನು ರೂಪಿಸುತ್ತವೆ ಎಂದು ಮನೋವಿಜ್ಞಾನಿಗಳು ಹೇಳುತ್ತಿದ್ದಾರೆ.

ಶಾಲೆಗಳಲ್ಲಿ ದೊರೆಯುವ ಮಾಮೂಲು ಶಿಕ್ಷಣದೊಂದಿಗೆ ಮೌಲ್ಯಗಳನ್ನು ತಿಳಿಸುವ ಧಾರ್ಮಿಕ ಶಿಕ್ಷಣವೂ ಅಗತ್ಯವೆಂದು ಮಕ್ಕಳ ತಜ್ಞರು ಹೇಳುತ್ತಿದ್ದಾರೆ. ಮಗು ತನ್ನ ಒಂಬತ್ತು ವರ್ಷದ ಒಳಗೆ ಮೌಲ್ಯಗಳ ಕುರಿತಂತೆ ದೃಢವಾದ ಅಭಿಪ್ರಾಯವನ್ನು ಬೆಳೆಸಿಕೊಳ್ಳುತ್ತದೆ ಎಂದು ಮಕ್ಕಳ ನಡವಳಿಕೆಯನ್ನು ಅಧ್ಯಯನ ಮಾಡಿರುವ ಡಾ. ಆ್ಯನ್ ಇಸಾಕ್ ಹೇಳುತ್ತಾರೆ. ಹಿಂದಿನ ಕಾಲದಲ್ಲಿ ಒಂದು ತಲೆಮಾರಿನಿಂದ ಮತ್ತೊಂದಕ್ಕೆ ಆಚಾರ, ವಿಚಾರಗಳು, ನೈತಿಕ ಮೌಲ್ಯಗಳು ಹರಿದುಬರುತ್ತಿದ್ದವು. ಹಿರಿಯರನ್ನು ಗಮನಿಸುವ ಮೂಲಕ ಮಕ್ಕಳು ತಮ್ಮ ನಡವಳಿಕೆಯನ್ನು ರೂಪಿಸಿಕೊಳ್ಳುತ್ತಿದ್ದರು. ಆದರೆ, ಈಗ ಸಣ್ಣ ಕುಟುಂಬಗಳಿಗೇ ಸೀಮಿತವಾಗಿರುವ ಮನೆಗಳಲ್ಲಿ ತಾಯಿ ತಂದೆಯರಿಗೆ ಮಕ್ಕಳ ಬಗ್ಗೆ ಗಮನ ನೀಡಲು ಸಮಯ ದೊರೆಯುತ್ತಿಲ್ಲ. ಇದರ ಜೊತೆಗೆ, ಟಿ.ವಿ. ಹಾಗೂ ಅಂತರ್ಜಾಲಗಳು ಎಲ್ಲರ ಸಮಯವನ್ನು ದೋಚುತ್ತಿವೆ. ಮಕ್ಕಳೊಂದಿಗೆ ಹೇಗೆ ವ್ಯವಹರಿಸಬೇಕು ಎಂಬ ತಿಳಿವಳಿಕೆ ಆಧುನಿಕರಲ್ಲಿ ಕಂಡುಬರುವುದಿಲ್ಲ. ಎಳೆಯ ಹಾಗೂ ಕುತೂಹಲದ ಮನಸ್ಸುಳ್ಳ ಮುಗ್ಧ ಮಕ್ಕಳಲ್ಲಿ ನೈತಿಕತೆ ಹಾಗೂ ಮೌಲ್ಯಗಳ ಬಲವಾದ ಅಡಿಪಾಯವನ್ನು ಹಾಕುವವರೇ ಇಲ್ಲ. ಶಾಲೆಗಳಲ್ಲೂ ಈ ನಿಟ್ಟಿನಲ್ಲಿ ಸಮರ್ಪಕ ಪ್ರಯತ್ನ ನಡೆಯುತ್ತಿಲ್ಲ.

> **ಬೌದ್ಧಿಕ ಹಾಗೂ ಜಿಜ್ಞಾಸು ಗುಣಗಳನ್ನು ಬೆಳೆಸಿಕೊಳ್ಳಲು ಮತ್ತು ತನ್ನನ್ನು ತಾನು ಅರಿತುಕೊಳ್ಳಲು, ಅದರೊಟ್ಟಿಗೇ ವಿಶ್ವವನ್ನು ಅರಿತು, ಅಧ್ಯಾತ್ಮವನ್ನು ಪ್ರವೇಶಿಸಲು ಮಗುವಿಗೆ ಅವಕಾಶ ಮಾಡಿಕೊಡಬೇಕು.**
> **—ಶ್ರೀಅರವಿಂದರು**

ಹಾಗಾದರೆ ಮಕ್ಕಳು ತಮ್ಮ ಅಂತರಂಗವನ್ನು ರೂಪಿಸಿಕೊಳ್ಳುವುದು ಹೇಗೆ? ಟಿ.ವಿ.ಯಲ್ಲಿ ಬರುವ ನಾಯಕ-ನಾಯಕಿಯರ ಥಳಕು ಬಳುಕಿನ ಜೀವನದಿಂದಲೇ? ಅಶ್ಲೀಲತೆಯನ್ನೇ ರಾಚುವ ಧಾರಾವಾಹಿಗಳಿಂದ ಎಂತಹ ಆದರ್ಶಗಳನ್ನು ತಾನೇ ಮಕ್ಕಳು ಕಲಿಯಬಲ್ಲರು? ಶಾಲೆಗಳಲ್ಲಿ ಮತ್ತು ಟ್ಯೂಷನ್ ಕೇಂದ್ರಗಳಲ್ಲಿ ಹೆಚ್ಚು ಅಂಕ ಗಳಿಸುವ ಪೈಪೋಟಿ, ಒತ್ತಡ ಹಾಗೂ 'ಮಾಹಿತಿ ಗೋದಾಮು' ಮಾಡಿಕೊಳ್ಳುವ ಮಾರ್ಗಗಳನ್ನು ಹೇಳಿಕೊಡಲಾಗುತ್ತಿದೆ. ಶಾಲೆಯ ವಾತಾವರಣದಲ್ಲಿಯೇ ಮೌಲ್ಯಗಳನ್ನು ತಿಳಿಸಿಕೊಡುವ ಕ್ರಮವನ್ನು ಈಗ ಕೈಗೊಳ್ಳಬೇಕಾಗಿದೆ. ನೈತಿಕ ಶಿಕ್ಷಣಕ್ಕೆಂದೇ ಮೀಸಲಾದ ವೇಳೆಯನ್ನು ಶಾಲಾ ಪಠ್ಯಕ್ರಮದಲ್ಲಿಯೂ ಅಳವಡಿಸುವ ಮೂಲಕ ಮಕ್ಕಳಿಗೆ ಉತ್ತಮ ವಿಚಾರಗಳನ್ನು ಬೋಧಿಸಬಹುದು. ಅಧ್ಯಾಪಕರ ನಡವಳಿಕೆಯೂ ವಿದ್ಯಾರ್ಥಿಗಳ ಮೇಲೆ ಬಹಳ ಪ್ರಭಾವ ಬೀರುವುದರಿಂದ ಅದರ ಬಗ್ಗೆ ಕೂಡ ಎಚ್ಚರದಿಂದ ಇರಬೇಕಾದುದು ಅಗತ್ಯ. ಒಂದು ಸಮೀಕ್ಷೆಯ ಪ್ರಕಾರ ಫ್ರಾನ್ಸ್ ದೇಶದ ಶೇ.೮೦ ವಿದ್ಯಾರ್ಥಿಗಳು "ಅಧ್ಯಾಪಕರು ಉತ್ತಮ ವ್ಯಕ್ತಿಗಳಾಗಿರಬೇಕೆಂದು ನಾವು ಬಯಸುತ್ತೇವೆ" ಎಂದು ತಿಳಿಸಿದ್ದಾರೆ. ಶಿಕ್ಷಕರ ನಡತೆಯೇ ಪ್ರತಿಕ್ಷಣವೂ ಮಕ್ಕಳಿಗೆ ಶಿಕ್ಷಣ ನೀಡುವಂತಿರಬೇಕು. ಶಿಸ್ತು, ಸಮಯ ಪ್ರಜ್ಞೆ, ಸ್ವಚ್ಛತೆ, ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಭಾವ, ಮಾನವೀಯ ಸಂಬಂಧಗಳ ಬಗ್ಗೆ ಪ್ರೀತಿ-ಗೌರವ, ಧರ್ಮದ ಹೆಸರಿನಲ್ಲಿ ದ್ವೇಷ ಸಾಧಿಸದೆ ಇರುವುದು ಹಾಗೂ ಮೋಸ, ವಂಚನೆಗಳ ದುಷ್ಟ ಮಾರ್ಗಗಳನ್ನು ಅನುಸರಿಸದೇ ಇರುವುದು—ಇವೆಲ್ಲವೂ ಶಿಕ್ಷಣದ ಕ್ಷೇತ್ರದಲ್ಲಿ ಮಕ್ಕಳಿಗೆ ದೊರೆಯಬೇಕಾದ ಧರ್ಮಜೀವನದ ಅಡಿಗಲ್ಲುಗಳು.

ಧಾರ್ಮಿಕ ಶಿಕ್ಷಣವು ಮನೆಯಿಂದಲೇ ಪ್ರಾರಂಭವಾಗಬೇಕು. ಮಕ್ಕಳನ್ನು ಶಾಲೆಗೆ ಕಳಿಸಿದ ಕೂಡಲೇ ತಮ್ಮ ಕರ್ತವ್ಯ ಮುಗಿಯಿತು ಎಂದು ಭಾವಿಸುವ ತಾಯಿತಂದೆಯರಿದ್ದಾರೆ. ಹಾಗೆ ನೋಡಿದರೆ, ಹುಟ್ಟಿದ ಕ್ಷಣದಿಂದಲೇ ಮಗುವಿನ ಶಿಕ್ಷಣ ಪ್ರಾರಂಭವಾಗುತ್ತದೆ. ಮಕ್ಕಳಲ್ಲಿ ಭಯದ ಮೂಲಕ ಶಿಸ್ತನ್ನು ಹೇರುವ ಕುಟುಂಬಗಳಿವೆ. ಭಯದಿಂದ ಹುಟ್ಟಿದ ನೈತಿಕತೆ ನೈಜವಾಗಿರುವುದಿಲ್ಲ. ಇಂತಹವರಲ್ಲಿ ದೇವರ ಮೇಲಿನ ನಂಬಿಕೆಯೂ ಕೂಡ ಭಯದಿಂದಲೇ ಹುಟ್ಟಿರುತ್ತದೆ. ವಿಶ್ವಾಸ ಹಾಗೂ ಪ್ರೀತಿಯ ವರ್ತನೆ ಹಾಗೂ ಸ್ಪಷ್ಟವಾದ ತಿಳಿವಳಿಕೆಯನ್ನು ಆಧರಿಸಿದ ಸನ್ಮಾರ್ಗವನ್ನು ಹೇಳಿಕೊಟ್ಟರೆ ಮಕ್ಕಳು ಅನಂತರ ದೇವರಲ್ಲಿ ಸಹಜವಾಗಿಯೇ ಪ್ರೀತಿಯ ಸಂಬಂಧವನ್ನು ಅರಳಿಸಿಕೊಳ್ಳುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ಇಂತಹ ಮಕ್ಕಳು ಮಾನವೀಯ ಸಂಬಂಧಗಳಲ್ಲಿ ಗಾಢವಾದ ನಂಬಿಕೆಯನ್ನು ಬೆಳೆಸಿಕೊಳ್ಳುತ್ತಾರೆ. ಶ್ರೀರಾಮಕೃಷ್ಣರ ಬಾಲ್ಯ ಜೀವನದ ಒಂದು ಘಟನೆ ಇದಕ್ಕೆ ಸರಿಯಾದ ನಿದರ್ಶನ. ಬಾಲಕ ಗದಾಧರ (ಶ್ರೀರಾಮಕೃಷ್ಣ ಪರಮಹಂಸರ ಮೊದಲ ಹೆಸರು) ಹಳ್ಳಿಯ ವಾತಾವರಣದಲ್ಲಿ ಬೆಳೆದವನು. ಮನೆಯ

ಬಳಿಯಲ್ಲಿದ್ದ ಕೊಳದಲ್ಲಿ ಹೆಂಗಸರಿಗಾಗಿ ಪ್ರತ್ಯೇಕವಾದ ಸ್ಥಳವಿರುವುದನ್ನು ಅವನು ಗಮನಿಸಿದ್ದ. ಬಾಲಕರೊಂದಿಗೆ ಅಲ್ಲಿಗೆ ಹೋಗಿ ನೀರಿನಲ್ಲಿ ಆಟವಾಡುತ್ತಿದ್ದ. ಒಂದು ದಿನ ಒಬ್ಬ ಮಹಿಳೆಗೆ ಇವರ ಆಟದಿಂದ ಮುಜುಗರವೆನಿಸಿತು; ಅವಳು ಅವನನ್ನು ಗದರಿ, ಹೆದರಿಕೆಯನ್ನು ಹುಟ್ಟಿಸಿದಳು: "ನೋಡು! ಹೆಂಗಸರು ಸ್ನಾನ ಮಾಡುವುದನ್ನು ನೋಡಿದರೆ ನಿನಗೆ ಕೆಟ್ಟದಾಗುವುದು. ಇಲ್ಲಿ ಬರಬೇಡ." ಗದಾಧರ ಇದನ್ನು ಪರೀಕ್ಷಿಸಿ ನೋಡಬೇಕೆಂದು ಕೆಲವು ದಿನಗಳ ಕಾಲ ಹೆಂಗಸರು ಸ್ನಾನ ಮಾಡುತ್ತಿದ್ದುದನ್ನು ಕದ್ದು ನೋಡಿದ. ಅನಂತರ ಆಕೆಯ ಬಳಿಗೆ ಬಂದು ಹೇಳಿದ, "ನೋಡಿ, ನಾನು ನಿನ್ನೆಯ ದಿನ ಎಂಟು ಮಹಿಳೆಯರು ಸ್ನಾನ ಮಾಡುವುದನ್ನು ಕಂಡೆ, ಅದರ ಹಿಂದಿನ ದಿನ ಆರು, ಅದಕ್ಕೂ ಹಿಂದಿನ ದಿನ ಏಳು. ನನಗೇನೂ ಆಗಲಿಲ್ಲ." ಆಕೆ ಈ ವಿಚಾರವನ್ನು ಅವನ ತಾಯಿ ಚಂದ್ರಮಣಿದೇವಿಗೆ ತಿಳಿಸಿದಳು.

ತಾಯಿಯು ಮಗನನ್ನು ಕರೆದು ಹೇಳಿದಳು, "ಮಗು, ನೀನು ಈ ರೀತಿ ಮಾಡಬಾರದು. ಇದರಿಂದ ನಿನಗೇನೂ ಆಗದೇ ಇರಬಹುದು. ಆದರೆ ಮಹಿಳೆಯರಿಗೆ ಅವಮಾನ ವಾದಂತಾಗುವುದು. ಅವರೆಲ್ಲ ನನ್ನಂತೆಯೇ. ಅವರಿಗೆ ಅವ ಮಾನ ಮಾಡಿದರೆ ಅದು ನನಗೇ ಅವಮಾನ ಮಾಡಿದ ಹಾಗೆ. ಆದ್ದರಿಂದ ಅಂಥ ಕಾರ್ಯವನ್ನು ನೀನು ಎಂದೂ ಮಾಡ ಬೇಡ. ಅವರ ಮತ್ತು ನನ್ನ ಮನಸ್ಸನ್ನು ನೋಯಿಸುವುದು ಸರಿಯೆ?" ಗದಾಧರನಿಗೆ ವಿಷಯ ಸರಿಯಾಗಿ ಅರ್ಥ ವಾಯಿತು. ಮತ್ತೆಂದೂ ಅಂತಹ ಕಾರ್ಯ ಮಾಡಲಿಲ್ಲ. ಇದೇ ಕಾರಣವಾಗಿ ಎಲ್ಲ ಮಹಿಳೆಯರಲ್ಲೂ ತಾಯಿಯನ್ನೇ ಕಾಣುವ ಪವಿತ್ರ ದೃಷ್ಟಿ ಬೆಳೆಸಿಕೊಂಡ.

ಮಗುವು ಸಂಶಯ, ಮೋಸ, ಜಗಳ, ಸ್ವಾರ್ಥ ಮನೋ ಭಾವಗಳನ್ನು ರೂಢಿಸಿಕೊಳ್ಳುವುದೋ ಅಥವಾ ಶ್ರದ್ಧೆ, ಋಜುತ್ವ, ಸಹಕಾರ, ನಿಷ್ಠೆಗಳಂತಹ ಗುಣಗಳನ್ನು ಹೊಂದುವುದೋ ಎನ್ನು ವುದು ಬಹುಮಟ್ಟಿಗೆ ಆಯಾ ಮನೆಯ ವಾತಾವರಣವನ್ನೇ ಅವಲಂಬಿಸಿರುತ್ತದೆ. ವ್ಯಕ್ತಿಯ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಜೀವನಗಳೂ ಕೂಡ ಮನೆಯಲ್ಲಿ ಆತನಿಗೆ ದೊರೆಯುವ ತರಬೇತಿಯಿಂದಲೇ ರೂಪಿತವಾಗಿರುತ್ತವೆ. ನಡತೆಯೇ ಧರ್ಮದ ಹೆಗ್ಗುರುತಾದ್ದರಿಂದ ತಮಗರಿವಿಲ್ಲದೆ ತಾಯಿ ತಂದೆ ಯರು ಧರ್ಮಸೂಕ್ಷ್ಮತೆಯನ್ನು ಮಕ್ಕಳಿಗೆ ಹೇಳಿಕೊಡುತ್ತಾರೆ. ಧರ್ಮದ ವಿಚಾರದಲ್ಲಿ ಅನೇಕ ವೇಳೆ ಅನುಕರಣೆಯೇ ಹೆಚ್ಚಾಗಿ ಕಂಡುಬರುವುದು. ಸಮಾಜವು ಗುರುತಿಸುವ ಒಳ್ಳೆಯ ನಡವಳಿಕೆಯನ್ನು ಅನುಕರಿಸುವುದರ ಮೂಲಕ ಮಕ್ಕಳು ಸಭ್ಯತೆ, ನಯ-ವಿನಯ, ಸತ್ಯನಿಷ್ಠೆಗಳನ್ನು ಕಲಿಯುತ್ತಾರೆ. ಅವರಲ್ಲಿರುವ ಒಳ್ಳೆಯತನಕ್ಕೆ ಮನೆಯ ವಾತಾವರಣವು ಪುಷ್ಟಿ ನೀಡುತ್ತದೆ, ಅದನ್ನು ಹೆಚ್ಚು ಸ್ಥಿರಗೊಳಿಸುತ್ತದೆ. ಅಂತೆಯೇ ಮನೆಯಲ್ಲಿ ತಾಯಿತಂದೆಯರು ಇತರ ಧರ್ಮಗಳ ಬಗ್ಗೆ ತಿರಸ್ಕಾರ ವ್ಯಕ್ತಪಡಿಸಿದರೆ, ಜಾತೀಯ ಭಾವನೆಗಳನ್ನು, ಅಭಿಪ್ರಾಯ ಗಳನ್ನು ವ್ಯಕ್ತಪಡಿಸುತ್ತಿದ್ದರೆ, ಹಣವಂತ-ಬಡವ ಎಂಬ ಭೇದ ವನ್ನು ಅನುಸರಿಸಿದರೆ ಅವರ ಮಕ್ಕಳೂ ಅದೇ ಸರಿ ಎಂದು ಭಾವಿಸುತ್ತಾರೆ, ಅನಂತರ ಅದನ್ನೇ ಮುಂದುವರಿಸುತ್ತಾರೆ.

ಕೆಲವು ಮನೆಗಳಲ್ಲಿ ಮಕ್ಕಳಿಗೆ ಪ್ರಾರ್ಥನೆ, ಸ್ತೋತ್ರ ಇತ್ಯಾದಿಗಳನ್ನು ಹೇಳಿಕೊಡುವುದೇ ಇಲ್ಲ. ಒಟ್ಟಾಗಿ ಕುಳಿತು ಪ್ರಾರ್ಥಿಸುವುದು ಹಾಗೂ ಉತ್ತಮ ವಿಚಾರಗಳನ್ನು ತಿಳಿಸುವ ಗ್ರಂಥಗಳನ್ನು ಓದುವುದರ ಮೂಲಕ ಮಕ್ಕಳಲ್ಲಿ ಸಹಜವಾಗಿ ಮೂಡುವ ಅನೇಕ ಪ್ರಶ್ನೆಗಳಿಗೆ ಉತ್ತರ ದೊರೆಯಬಲ್ಲುದು. ಅಂತರಂಗದ ಪಕ್ವತೆ ಮಕ್ಕಳಲ್ಲಿ ಮೂಡಬೇಕಾದರೆ ತಾಯಿ ತಂದೆಯರು ಕೊಡುವ ಉಪದೇಶಕ್ಕಿಂತಲೂ ಅವರ ನಡತೆಯೇ ಮುಖ್ಯವಾಗುತ್ತದೆ. ಮನೆಯ ಹಿರಿಯರಿಗಾಗಿ ಅಥವಾ ಕಷ್ಟದಲ್ಲಿರುವವರಿಗಾಗಿ, ಪ್ರೀತಿಪಾತ್ರರಿಗಾಗಿ ಮಾಡುವ ಪ್ರಾರ್ಥನೆಗಳಲ್ಲಿ ಪಾಲ್ಗೊಂಡಾಗ ಮಕ್ಕಳಿಗೆ ಪ್ರೀತಿ, ವಿಶ್ವಾಸಗಳ ಅಗಾಧ ವ್ಯಾಪ್ತಿಯ ಪರಿಚಯವಾಗುತ್ತದೆ.

ಸಮಾಜದೊಡನೆ ತಮಗಿರುವ ಬಾಂಧವ್ಯದ ಬಗ್ಗೆ, ತಮಗೂ ಇತರರಿಗೂ ಇರುವ ಸಂಬಂಧಗಳ ಬಗ್ಗೆ ಮಕ್ಕಳು ಸಂತೋಷ ಕೂಟಗಳ ಮೂಲಕ ಮಾತ್ರ ಕಲಿಯಬೇಕಾಗಿಲ್ಲ. ಶುಭಸಂದರ್ಭಗಳಲ್ಲಿ ಹಾಗೂ ಹಬ್ಬಹರಿದಿನಗಳಲ್ಲಿ ಒಟ್ಟಾಗಿ ಭಾಗವಹಿಸುವುದು ಹಾಗೂ ನಮ್ಮ ಸಾಂಸ್ಕೃತಿಕ ಪರಂಪರೆ ಯನ್ನು ತಿಳಿಯುವುದು ಮಕ್ಕಳ ಜೀವನದ ಒಂದು ಪ್ರಮುಖ ಅಂಗವೆಂಬುದು ಅವರಿಗೆ ಗೊತ್ತಾಗಬೇಕು. ಸಮಯ ದೊರೆತಾಗಲೆಲ್ಲ ದೂರದರ್ಶನದ ಮುಂದೆ ಕುಳಿತುಕೊಳ್ಳುವುದು ಇಲ್ಲವೇ ಷಾಪಿಂಗ್ ಹೋಗುವ ಪ್ರವೃತ್ತಿ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಸಂಬಂಧಿಕರನ್ನು ಭೇಟಿಮಾಡಿ ಅವರ ಕಷ್ಟ ಸುಖಗಳನ್ನು ಹಂಚಿಕೊಳ್ಳುವ ಮಾನವೀಯತೆ ಕಡಮೆ ಯಾಗುತ್ತಿದ್ದು ಪ್ರತ್ಯೇಕವಾಗಿ, ದೂರವಾಗಿ ಇರುವುದಕ್ಕೇ ಹೆಚ್ಚು ಪ್ರಾಶಸ್ತ್ಯ ರೂಢಿಯಾಗುತ್ತಿದೆ. ಇದರಿಂದ ವ್ಯಕ್ತಿಯ ವಿಕಾಸಕ್ಕೆ ಅವಶ್ಯಕವಾದ ಪರಿವಾರದೊಂದಿಗಿನ ಸಂಬಂಧಭಾವ ಅಥವಾ ಗುರುತಿಸಿಕೊಳ್ಳುವಿಕೆಗೆ ಧಕ್ಕೆಯುಂಟಾಗುತ್ತಿದೆ. ಒಂದು ಮರದ ಬೇರುಗಳು ಶಿಥಿಲವಾದರೆ ಅದರ ಸ್ಥಿರತೆ ಸಡಿಲಗೊಳ್ಳುವಂತೆ ವ್ಯಕ್ತಿಯ ಸಾಂಸ್ಕೃತಿಕ ಹಾಗೂ ಬಾಂಧವ್ಯದ ಬೇರುಗಳು ಸಡಿಲ ಗೊಂಡರೆ ಅವನ ಆತ್ಮವಿಶ್ವಾಸಕ್ಕೂ ಧಕ್ಕೆ ಬರುತ್ತದೆ.

(ಮುಂದುವರಿಯುವುದು)

**ಚಿಕ್ಕವಯಸ್ಸಿನಲ್ಲಿ ತಂದೆ-ತಾಯಿಗಳ ಪ್ರೀತಿ ವಿಶ್ವಾಸಗಳನ್ನು ಪಡೆಯದ ಮಕ್ಕಳು ದೊಡ್ಡವರಾದ ಮೇಲೆ ಉಳಿದವರಿಗೆ ಅದನ್ನು ಕೊಡಲು ಅಸಮರ್ಥರಾಗುತ್ತಾರೆ.**

—ಬರ್ಟ್ರಂಡ್ ರಸೆಲ್